ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಇಲ್ಲಿಯವರೆಗೂ ಸರ್ಕಾರದವರು ಈ ಗೇರು ಸಾಗುವಳಿಗೆ ಕೊಟ್ಟಿರತಕ್ಕ ಜಮೀನು ಕೇವಲ ಬಂಡವಾಳಷಾಹಿಗಳಿಗೆ ಸಿಕ್ಕಿರುವುದರಿಂದ ಇನ್ನು ಮುಂದಕ್ಕಾದರೂ ಈ ಜಮೀನು ಬಡವರಿಗೂ ಸಿಕ್ಕುವಂತೆ ಒಂದು ಯೋಜನೆಯನ್ನು ಸರ್ಕಾರದವರು ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಗೇರು ಬೆಳೆಯನ್ನು ಮಾಡುವುದಕ್ಕೆ ಯಾರು ಮುಂದೆ ಬರುತ್ತಾರೋ ಅವರಿಗೆ ಸರ್ಕಾರದವರು ಪ್ರೋತ್ಸಾಹ ಕೊಡುತ್ತಾರೆ. ಇದನ್ನು ಕೇವಲ ಬಡವರಿಗೇ ಕೊಡಬೇಕೆಂದೇನೂ ನಿಯಮಾವಳಿಯಲ್ಲಿ ಯಾವ ನಿರ್ಬಂಧವನ್ನೂ ಹಾಕಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಒಬ್ಬ ಮನುಷ್ಯನಿಗೆ ಗೇರುಬೆಳೆ ಇಡತಕ್ಕ ಜಮೀನಿಲ್ಲದಿದ್ದರೂ ಆತನಿಗೆ ಇನ್ನು ಬೇರೆ ಜಮೀನು ಒಂದು ನೂರು ಎಕರೆ ಇದ್ದರೂ ಆತನು ತನಗೆ ಗೇರು ಬೆಳೆಯುವುದಕ್ಕೆ ಜಮೀನು ಬೇಕೆಂದರೆ, ಸರ್ಕಾರದವರು ಅವರಿಗೆ ಮತ್ತಿಷ್ಟು ಜಮೀನನ್ನು ಕೊಡುತ್ತೀರಾ ? ಈ ಭೂಮಿ ಹಂಚಿಕೆ ವಿಚಾರದಲ್ಲಿ ಸರ್ಕಾರದವರ ಒಂದು ನಿರ್ದಿಷ್ಟವಾದ ನೀತಿಯೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರ್ಯಾಂಡ್ ಗ್ರಾಂಟ್ ರೂಲ್ಸಿನಲ್ಲಿ ಯಾರೊಬ್ಬರಿಗೇ ಆಗಲೀ ಈ ಗೇರು ಬೆಳೆಯತಕ್ಕ ಭೂಮಿ ಹತ್ತು ಎಕರೆಗಳಿಗೆ ಜಾಸ್ತಿ ಇರಬಾರದು ಎಂದು ಒಂದು ನಿರ್ಬಂಧ ಇದೆ. ಅಂಥವರಿಗೆ ಬೇರೆ ಜಮೀನಿದ್ದರೆ ಈ ಗೇರು ಸಾಗುವಳಿಗೆ ಭೂಮಿಯನ್ನು ಕೊಡಬಾರದೆಂಬ ನಿರ್ಬಂಧವೇನೂ ಇಲ್ಲ. ಆದರೆ ಮುಂದೆ ಬರಲಿರುವ ಭೂಸುಧಾರಣಾ ಮಸೂದೆಯಲ್ಲಿ ಭೂಮಿತಿಯನ್ನು ಹಾಕಿರುವುದರಿಂದ ಆ ನಂತರ ಅಂಥವರಿಗೆ ಹೀಗೆ ಭೂಮಿ ಕೊಡತಕ್ಕದ್ದನ್ನು ನಿಲ್ಲಿಸಬಹುದೆಂದು ಕಾಣುತ್ತದೆ. ಹಾಗೂ ಇರತಕ್ಕ ರ್ಯಾಂಡ್ ಗ್ರಾಂಟ್ ರೂಲ್ಸಿನಲ್ಲೇ ಇದನ್ನು ಅಳವಡಿಸತಕ್ಕ ಆಲೋಚನೆ ಸರ್ಕಾರದವರ ಪರಿಶೀಲನೆಯಲ್ಲಿ ಇದೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸಾರ್.—ಶಿವಮೊಗ್ಗ ಜಿಲ್ಲೆಯಲ್ಲಿ ಗೇರು ಸಾಗುವಳಿಗೆ ಭೂಮಿಯನ್ನು ಕೊಟ್ಟಿರತಕ್ಕ ತಾಲ್ಲೂಕುಗಳ ಹೆಸರನ್ನು ತಿಳಿಸುತ್ತಾ ಸರ್ಕಾರದವರು ಸಾಗರ, ತೀರ್ಥಹಳ್ಳಿ ಮತ್ತು ಸೊರಬ ಈ ಮೂರನ್ನೇ ಹೇಳಿದ್ದಾರೆ. ನಮ್ಮ ಭದ್ರಾವತಿ ಹೆಸರನ್ನು ಏಕೆ ಕೈ ಬಿಟ್ಟರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸಾರ್.—ಅಲ್ಲಿ ಶ್ರೀ ಗುರುಶಾಂತಪ್ಪ ಎನ್ನುತಕ್ಕವರಿಗೆ 30 ಎಕರೆ ಕೊಟ್ಟಿದೆ. ಅದನ್ನು ವಾಪಸ್ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರು ಗೇರುಸಾಗುವಳಿಗೆ ಜಮೀನನ್ನು ಪಡೆದು ಅದನ್ನು 15 ವರ್ಷಗಳಲ್ಲಿ ಆ ಉದ್ದೇಶಕ್ಕೆ ಬಳಸದೆ ಇದ್ದಾರೆ ಅಥವಾ ಆ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಾರೆ, ಅಂಥ ಸಂದರ್ಭಗಳಲ್ಲಿ ಆ ಜಮೀನನ್ನು ಅವರಿಂದ ಅಕ್ವಯಿರ್ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿಯವರೆಗೂ ಈ ನೆಪದಲ್ಲಿ ಯಾರು ಯಾರು ಜಮೀನನ್ನು ಪಡೆದಿದ್ದಾರೋ ಅವರೆಲ್ಲಾ ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆದುದರಿಂದ ಇನ್ನು ಮುಂದೆ ಕೇವಲ ಯಾರಿಗೆ ಜಮೀನಿಲ್ಲವೋ ಅಂಥವರಿಗೆ ಮಾತ್ರ ಇದನ್ನು ಕೊಡುವುದಕ್ಕೆ ಒಂದು ನೀತಿಯನ್ನು ಹಾಕಿಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿಷಯ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ. ಈ ರೀತಿ ಜಮೀನನ್ನು ಪಡೆದು ಅದನ್ನು ದುರುಪಯೋಗ ಮಾಡಿರತಕ್ಕ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅಂಥವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಕೆ. ಯೆಂಕಟಪ್ಪ.—ಶಿಕಾರಿಪುರ ತಾಲ್ಲೂಕಿನಲ್ಲಿ ಹಾಲಿ ಗೇರುಸಾಗುವಳಿಗೆ ಕೊಟ್ಟಿರತಕ್ಕ ಜಮೀನಿನಲ್ಲಿ ಅಂದರೆ 25 ಎಕರೆ ಜಮೀನಿನಲ್ಲಿ ಕೇವಲ 25—30 ಗಿಡಗಳೂ ಕೂಡ ಇರುವುದಿಲ್ಲ. ಆದ್ದರಿಂದ ಈಗ ಅದನ್ನು ಕ್ಯಾನಸರ್ ಮಾಡಿ ಆ ಜಮೀನನ್ನು ಬಡವರಿಗೆ ಜಮೀನಿಲ್ಲದವರಿಗೆ ಹಂಚುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಮೀನನ್ನು ಸುಮಾರು 1967ಕ್ಕೂ ಮುಂಚೆಯೇ ಕೊಟ್ಟಿರಬೇಕು. ಅಲ್ಲ ಸ್ಥಳಪರಿಶೀಲನೆ ಮಾಡಿ ಅನಂತರ ತೀರ್ಮಾನ ತೆಗೆದುಕೊಳ್ಳಬೇಕು.